# ಲೈಂಗಿಕ ಕಿರುಕುಳಕ್ಕೆ ಕೊನೆ ಎಂದು?

ವಿಶ್ವವಿದ್ಯಾಲಯಗಳ ವಿದ್ಯಾರ್ಥಿನಿಯರ ಮೇಲೆ ಅಲ್ಲಿನ ಪ್ರಾಧ್ಯಾಪಕರೇ ಲೈಂಗಿಕ ಕಿರುಕುಳ ನೀಡುವ ಪ್ರಕರಣಗಳು ಇತ್ತೀಚಿನ ವರ್ಷಗಳಲ್ಲಿ ಹೆಚ್ಚಾಗಿವೆ. ಕರ್ನಾಟಕ ಮಾತ್ರವಲ್ಲ, ದೇಶದ ಅನೇಕ ವಿಶ್ವವಿದ್ಯಾಲಯಗಳಲ್ಲಿ ಇಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಲೈಂಗಿಕ ಕಿರುಕುಳ ನೀಡಿದ ಪ್ರಕರಣಗಳು ಬೆಳಕಿಗೆ ಬಂದಾಗಲೆಲ್ಲ ಜನರು ವಿಶ್ವವಿದ್ಯಾಲಯ ವ್ಯವಸ್ಥೆಯನ್ನೇ ಅನುಮಾನದಿಂದ ನೋಡುತ್ತಾರೆ. ಶಿಕ್ಷಕರ ಬಗ್ಗೆ ನಮ್ಮ ಜನರಿಗೆ ಗೌರವದ ಭಾವನೆಗಳಿವೆ. ಆದರೆ ಕೆಲವೇ ಮಂದಿ ಲಂಪಟರಿಂದಾಗಿ ವಿಶ್ವವಿದ್ಯಾಲಯಗಳ ಗೌರವ, ಘನತೆಗಳಿಗೆ ಕುಂದು ಬರುತ್ತಿದೆ. ನೂರಾರು ಶಿಕ್ಷಕರು ಶ್ರದ್ಧೆ, ಬದ್ಧತೆ ಹಾಗೂ ಪ್ರಾಮಾಣಿಕತೆಯಿಂದ ಕೆಲಸ ಮಾಡಿದರೂ ಪ್ರಯೋಜನವಾಗದು. ಕೆಲವೇ ಶಿಕ್ಷಕರ ಕೆಟ್ಟ ವರ್ತನೆಗಳಿಂದ ಇಡೀ ಶಿಕ್ಷಕ ಸಮುದಾಯ ಅಪರಾಧಿ ಸ್ಥಾನದಲ್ಲಿ ನಿಲ್ಲುವಂತೆ ಆಗಬಾರದು.

ವಿಶ್ವವಿದ್ಯಾಲಯಗಳು ಉನ್ನತ ಶಿಕ್ಷಣದ ದೇಗುಲಗಳಂತೆ ಇರಬೇಕು ಎನ್ನುವುದು ಆದರ್ಶ. ಜನರ ನಿರೀಕ್ಷೆಯೂ ಅದೇ. ಕೆಲವು ದಶಕಗಳ ಹಿಂದೆ ನಮ್ಮ ಬಹುತೇಕ ವಿಶ್ವ ವಿದ್ಯಾಲಯಗಳು ಹಾಗೇ ಇದ್ದವು. ಆದರೆ ಈಗ ಹಾಗಿಲ್ಲ. ಉನ್ನತ ಆದರ್ಶಗಳು ಹಾಗೂ ನಿರೀಕ್ಷೆಗಳು ತಲೆ ಕೆಳಗಾಗಿವೆ. ವಿಶ್ವ ವಿದ್ಯಾಲಯಗಳಲ್ಲಿ ಮಾತ್ರವಲ್ಲ ಶಾಲಾ, ಕಾಲೇಜುಗಳಲ್ಲೂ ವಿದ್ಯಾರ್ಥಿನಿಯರು ಹಾಗೂ ಮಹಿಳಾ ಸಿಬ್ಬಂದಿಗಳಿಗೆ ಲೈಂಗಿಕ ಕಿರುಕುಳ ನೀಡುವ ಪ್ರವೃತ್ತಿ ಹೆಚ್ಚಾಗಿದೆ. ಲೈಂಗಿಕ ಕಿರುಕುಳದ ಪ್ರಕರಣಗಳು ಬೆಳಕಿಗೆ ಬಂದಾಗ ಇಡೀ ಸಮಾಜ ಬೆಚ್ಚಿ ಬೀಳುತ್ತದೆ. ವಿ.ವಿ ಆಡಳಿತ ಆ ಕ್ಷಣದ ಮಟ್ಟಿಗೆ ಎಚ್ಚೆತ್ತುಕೊಂಡಂತೆ ವರ್ತಿಸುತ್ತದೆ. ದುರದೃಷ್ಟದ ಸಂಗತಿ ಎಂದರೆ ಜನರ ನೆನಪಿನ ಶಕ್ತಿ ಕಡಿಮೆ. ಮತ್ತೆ ಹೊಸ ಪ್ರಕರಣಗಳು ಬೆಳಕಿಗೆ ಬರುತ್ತವೆ.

ನಮ್ಮ ಶಿಕ್ಷಣ ಕ್ಷೇತ್ರ ಲೈಂಗಿಕ ಶೋಷಣೆಯಿಂದ ಮುಕ್ತವಾಗಿದ್ದರೆ ಸಾಲದು. ಜಾತೀಯತೆ, ಸ್ವಜನ ಪಕ್ಷಪಾತ, ಅನ್ಯಾಯ, ಅಕ್ರಮ ಇತ್ಯಾದಿಗಳಿಂದಲೂ ಮುಕ್ತವಾಗಿರಬೇಕು. 'ನಮ್ಮ ವಿಶ್ವವಿದ್ಯಾಲಯಗಳು ಹೀಗೇಕಾದವು' ಎಂಬ ಪ್ರಶ್ನೆ ಹಾಕಿಕೊಂಡು ಉತ್ತರ ಹುಡುಕುತ್ತ ಹೋದರೆ ನಮ್ಮ ವ್ಯವಸ್ಥೆಯಲ್ಲಿನ ಲೋಪಗಳೇ ಎದ್ದು ಕಾಣುತ್ತವೆ. ಜಾಗತೀಕರಣದ ನಂತರ ಶಿಕ್ಷಣ ಕ್ಷೇತ್ರ ಖಾಸಗೀಕರಣವಾಗುತ್ತ ಸಾಗಿದೆ. ಸರ್ಕಾರಿ ವಲಯದ ಶಿಕ್ಷಣ ಸಂಸ್ಥೆಗಳು ದುರ್ಬಲವಾಗುತ್ತಿವೆ. ವಿಶ್ವವಿದ್ಯಾಲಯಗಳಲ್ಲಿ ಜಾತಿ, ರಾಜಕೀಯ ಪ್ರಭಾವ, ಹಣ, ಪ್ರಾದೇಶಿಕ ಮನೋಭಾವ ಇತ್ಯಾದಿಗಳು ಹೆಚ್ಚಾಗಿ ಒಟ್ಟಾರೆ ವ್ಯವಸ್ಥೆ ಹಾಳಾಗಿದೆ.

ಲೈಂಗಿಕ ದೌರ್ಜನ್ಯದ ಆರೋಪ ಸಾಬೀತಾದರೂ ಸಂಬಂಧಪಟ್ಟವರಿಗೆ ಶಿಕ್ಷೆ ಆಗುವುದಿಲ್ಲ. ಜಾತಿ, ಹಣ, ರಾಜಕೀಯ ಪ್ರಭಾವ ಬಳಸಿಕೊಂಡು ಆರೋಪಿಗಳು ಶಿಕ್ಷೆಯಿಂದ ತಪ್ಪಿಸಿಕೊಳ್ಳುತ್ತಿದ್ದಾರೆ. ವಿದ್ಯಾರ್ಥಿನಿಯರು ಸದಾ ಅಸಹಾಯಕರು. ಪಿಎಚ್‌ಡಿ ವಿದ್ಯಾರ್ಥಿನಿಯರದು ವಿಚಿತ್ರ ಪರಿಸ್ಥಿತಿ. ಮಾರ್ಗದರ್ಶನ ಮಾಡುವ ಪ್ರಾಧ್ಯಾಪಕನ ಲೈಂಗಿಕ ಕಿರುಕುಳಗಳನ್ನು ಸಹಿಸಿಕೊಳ್ಳುವಂತೆಯೂ ಇಲ್ಲ. ಅದನ್ನು ಪಾಲಕರ ಗಮನಕ್ಕೂ ತರುವಂತಿಲ್ಲ. ಸದಾ ಅನಿಶ್ಚಿತ ಹಾಗೂ ತಳಮಳದ ಸ್ಥಿತಿಯಲ್ಲಿ ಶಿಕ್ಷಣ ಪಡೆಯುವಂತಹ ಪರಿಸ್ಥಿತಿ ಅವರದು. ಪ್ರಾಧ್ಯಾಪಕನ ವಿರುದ್ಧ ದೂರು ಕೊಟ್ಟರೆ ಭವಿಷ್ಯ ಹಾಳಾಗುತ್ತದೆ ಎಂಬ ಭಯ. ವಿದ್ಯಾರ್ಥಿನಿಯರ ಈ ಅಸಹಾಯಕತೆ ಅನೇಕ ಪ್ರಾಧ್ಯಾಪಕರ ನಿರ್ಲಜ್ಜ ವರ್ತನೆಗೆ ಕಾರಣವಾಗಿದೆ.

ಮೈಸೂರು ವಿಶ್ವವಿದ್ಯಾಲಯ ಒಂದು ಕಾಲದಲ್ಲಿ ಇಡೀ ದೇಶಕ್ಕೆ ಮಾದರಿಯಾಗಿತ್ತು. ಅಲ್ಲಿನ 'ಗುರು' ಪರಂಪರೆ ದೊಡ್ಡದು. ಆದರೆ ಈಗ ಪರಿಸ್ಥಿತಿ ಬದಲಾಗಿದೆ. ವಿಶ್ವವಿದ್ಯಾಲಯದ ಆಡಳಿತ ಅಸಹಾಯಕವಾಗಿದೆ. ಕಳೆದ ಕೆಲವು ವರ್ಷಗಳಲ್ಲಿ ಬೆಳಕಿಗೆ ಬಂದ ಲೈಂಗಿಕ ಕಿರುಕುಳದ ಪ್ರಕರಣಗಳ ಪೈಕಿ ಇಪ್ಪತ್ತೆರಡು ಪ್ರಕರಣಗಳಲ್ಲಿ ಆರೋಪಿಗಳ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುವಂತೆ ಮಾಡಿದ ಶಿಫಾರಸುಗಳನ್ನು ಜಾರಿಗೆ ತರುವ ವಿಷಯದಲ್ಲಿ ವಿಶ್ವ ವಿದ್ಯಾಲಯ ಕನಿಷ್ಠ ಆಸಕ್ತಿಯನ್ನೂ ತೋರಿಸಿಲ್ಲ ಎಂಬ ಆರೋಪವಿದೆ. ಉನ್ನತ ಶಿಕ್ಷಣ ಪಡೆಯಲು ಬರುವ ವಿದ್ಯಾರ್ಥಿನಿಯರು ಲೈಂಗಿಕ ಕಿರುಕುಳವನ್ನು ಸಹಿಸಿಕೊಳ್ಳುವುದು ಅನಿವಾರ್ಯ ಎನ್ನುವಂತಾಗಿದೆ. ಇದು ನಾಚಿಕೆಗೇಡಿನ ವಿಷಯವೇ ಸರಿ. ಮೈಸೂರು ವಿಶ್ವ ವಿದ್ಯಾಲಯ ಮಾತ್ರವಲ್ಲ ರಾಜ್ಯದ ಬಹುತೇಕ ಎಲ್ಲಾ ವಿ.ವಿ.ಗಳಲ್ಲೂ ಇದೇ ಪರಿಸ್ಥಿತಿ ಇದೆ. ಶಿಕ್ಷಕನಾಗಿ ನೇಮಕವಾಗುವ ವ್ಯಕ್ತಿ ಬುದ್ಧಿವಂತನಾಗಿದ್ದರೆ ಸಾಲದು. ಅವನು ಚಾರಿತ್ರ್ಯವಂತನೂ ಆಗಿರಬೇಕು. ಲೈಂಗಿಕ ಕಿರುಕುಳದ ಆರೋಪಗಳನ್ನು ಅತ್ಯಂತ ತ್ವರಿತವಾಗಿ ವಿಚಾರಣೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆ ಕೊಟ್ಟರೆ ಪರಿಸ್ಥಿತಿ ಸುಧಾರಿಸೀತು. ಅದೇನೇ ಇರಲಿ ಲೈಂಗಿಕ ಕಿರುಕುಳದ ಆರೋಪಿಗಳಿಗೆ ಗರಿಷ್ಠ ಪ್ರಮಾಣದ ಶಿಕ್ಷೆಯಾಗಬೇಕು. ವಿ.ವಿ. ಕಾಯಿದೆಗೆ ತಿದ್ದುಪಡಿ ತಂದಾದರೂ ವಿದ್ಯಾರ್ಥಿನಿಯರಿಗೆ ರಕ್ಷಣೆ ನೀಡಬೇಕು.

■ ಪ್ರೇಮಕುಮಾರ್ ಹರಿಯಬ್ಬೆ

ನಮ್ಮ ಶಿಕ್ಷಣ ಕ್ಷೇತ್ರ ಲೈಂಗಿಕ ಶೋಷಣೆಯಿಂದ ಮುಕ್ತವಾಗಿದ್ದರೆ ಸಾಲದು. ಜಾತೀಯತೆ, ಸ್ವಜನ ಪಕ್ಷಪಾತ, ಅನ್ಯಾಯ, ಅಕ್ರಮ ಇತ್ಯಾದಿಗಳಿಂದಲೂ ಮುಕ್ತವಾಗಿರಬೇಕು. 'ನಮ್ಮ ವಿಶ್ವವಿದ್ಯಾಲಯಗಳು ಹೀಗೇಕಾದವು' ಎಂಬ ಪ್ರಶ್ನೆ ಹಾಕಿಕೊಂಡು ಉತ್ತರ ಹುಡುಕುತ್ತ ಹೋದರೆ ನಮ್ಮ ವ್ಯವಸ್ಥೆಯಲ್ಲಿನ ಲೋಪಗಳೇ ಎದ್ದು ಕಾಣುತ್ತವೆ. ಜಾಗತೀಕರಣದ ನಂತರ ಶಿಕ್ಷಣ ಕ್ಷೇತ್ರ ಖಾಸಗೀಕರಣವಾಗುತ್ತ ಸಾಗಿದೆ. ಸರ್ಕಾರಿ ವಲಯದ ಶಿಕ್ಷಣ ಸಂಸ್ಥೆಗಳು ದುರ್ಬಲವಾಗುತ್ತಿವೆ. ವಿಶ್ವವಿದ್ಯಾಲಯಗಳಲ್ಲಿ ಜಾತಿ, ರಾಜಕೀಯ ಪ್ರಭಾವ, ಹಣ, ಪ್ರಾದೇಶಿಕ ಮನೋಭಾವ ಇತ್ಯಾದಿಗಳು ಹೆಚ್ಚಾಗಿ ಒಟ್ಟಾರೆ ವ್ಯವಸ್ಥೆ ಹಾಳಾಗಿದೆ.

